# ಹಾಲಿವುಡ್‌ನತ್ತ ಸೋನಮ್



ಅಪ್ಪ ಅನಿಲ್ ಕಪೂರ್ ಹಾದಿಯಲ್ಲಿ ನಡೆಯುತ್ತಿರುವ ಸೋನಮ್ ಕಪೂರ್ ಹಾಲಿವುಡ್‌ಗೆ ಕಾಲಿಡುತ್ತಿದ್ದಾರೆ ಎಂಬ ಗಾಳಿಸುದ್ದಿ ಬಾಲಿವುಡ್ ಕಿಟಕಿಯಿಂದ ಹೊರಬಂದಿದೆ. ಈ ಸುದ್ದಿ ಹೊಸತೇನೂ ಅಲ್ಲ. ಹಿಂದೆಯೂ ಇದೇ ಸುದ್ದಿ ಹೊಗೆಯಾಡಿತ್ತು. 'ಹಾಗೇನೂ ಇಲ್ಲ. ಹಾಲಿವುಡ್‌ನ ಯಾವ ಚಿತ್ರಕ್ಕೂ ಸಹಿ ಹಾಕಿಲ್ಲ' ಎಂದು ಹೊಗೆಯನ್ನು ತಣ್ಣಗಾಗಿಸಿದ್ದರು ಸೋನಮ್. ಆದರೆ ಈಗ ಮತ್ತೆ ಆ ಹೊಗೆ ತುಸು ದಟ್ಟವಾಗಿಯೇ ಎದ್ದಿದೆ.

ಹೊಸ ವರ್ತಮಾನದ ಪ್ರಕಾರ 'ಸಾವರಿಯಾ' ಬೆಡಗಿ 'ಪೈರೇಟ್ಸ್ ಆಫ್ ದಿ ಕೆರೆಬಿಯನ್ 5' ಚಿತ್ರದ ಪಾತ್ರಕ್ಕಾಗಿ ನಡೆದ ಆಡಿಷನ್‌ನಲ್ಲಿ ಪಾಲ್ಗೊಂಡಿದ್ದಾರಂತೆ. ಸೋನಮ್ ಅಭಿನಯ ಪರೀಕ್ಷೆ ಮುಂಬೈನಲ್ಲಿ ನಡೆಸಲಾಗಿದೆ. ಹಾಗೆಯೇ ವೀಡಿಯೋ ಕಾನ್ಫರೆನ್ಸ್‌ನಲ್ಲಿ ಸೋನಮ್ ಚಿತ್ರ ತಂಡದೊಂದಿಗೆ ಮಾತುಕತೆ ನಡೆಸಿದ್ದಾರಂತೆ. ಅಂದ ಹಾಗೆ, 'ಪೈರೇಟ್ಸ್ ಆಫ್ ದಿ ಕೆರೆಬಿಯನ್' ಸರಣಿಯ ಐದನೇ ಭಾಗದಲ್ಲಿ ಸೋನಮ್ ಬಣ್ಣ ಹಚ್ಚಲಿರುವುದು ಖ್ಯಾತ ಬ್ರಿಟಿಷ್ ನಟ ಜಾನಿ ಡೆಪ್ ಎದುರು. ಹೀಗೆ ಅಂತೆಕಂತೆಗಳ ಸಂತೆಯ ನಡುವೆ ಸೋನಮ್‌ಗೆ ಸಿಗಲಿರುವ ಪಾತ್ರದ ಬಗ್ಗೆ ಜೋರಾಗಿಯೇ ಲೆಕ್ಕಾಚಾರಗಳು ನಡೆಯುತ್ತಿವೆ. 'ಸ್ಲಂ ಡಾಗ್ ಮಿಲೇನಿಯರ್' ಮೂಲಕ ಹಾಲಿವುಡ್ ಅಂಗಳ ಪ್ರವೇಶಿಸಿದ ಅನಿಲ್ ಕಪೂರ್ ಮಗಳಾಗಿರುವ ಕಾರಣಕ್ಕಾಗಿ ಈ ಅವಕಾಶ ಸಿಕ್ಕಿದೆಯೇ ಅಥವಾ ಆಕೆಯ ಪ್ರತಿಭೆಗೆ ಸಿಕ್ಕ ಮನ್ನಣೆಯೇ ಎಂಬ ಚರ್ಚೆ ಹುಟ್ಟಿಕೊಂಡಿದೆ.

ಜಾಕಿ ಚಾನ್‌ರ 'ದಿ ಮಿಥ್' ಚಿತ್ರದಲ್ಲಿ ಮಲ್ಲಿಕಾ ಶೆರಾವತ್‌ಗೆ ಸಿಕ್ಕಂತೆ ಭಾರತೀಯ ಯುವತಿಯ ಪಾತ್ರ ಈ ಚಿತ್ರದಲ್ಲಿರಬಹುದು, ಅನಿಲ್ ಕಪೂರ್ 'ಮಿಷನ್ ಇಂಪಾಸಿಬಲ್–ಘೋಸ್ಟ್ ಪ್ರೊಟೊಕಾಲ್' ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಂತೆ, ಸೋನಮ್ ಕಾಣಿಸಿಕೊಳ್ಳಬಹುದೆಂಬ ಊಹೆಗಳೂ ಹುಟ್ಟಿಕೊಂಡಿವೆ. ಸದ್ಯಕ್ಕಂತೂ ಸೋನಮ್ ಗಪ್‌ಚುಪ್!

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65


